# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಸಿ ಟಿ ರವಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1215 (1341) |
| ಉತ್ತರಿಸಬೇಕಾದ ದಿನಾಂಕ | : | 22.08.2025 |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ. ಸ | ಪ್ರಶ್ನೆ | ಉತ್ತರಗಳು |
|---|---|---|
| ಅ) | ಚಿಕ್ಕಮಗಳೂರು ಜಿಲ್ಲೆಯ ಕಡೂರು, ತರೀಕೆರೆ ಹಾಗೂ ಚಿಕ್ಕಮಗಳೂರು ತಾಲ್ಲೂಕುಗಳ ಗ್ರಾಮಗಳಿಗೆ ಭದ್ರಾ ಅಣೆಕಟ್ಟೆಯಿಂದ ಕುಡಿಯುವ ನೀರು ಒದಗಿಸುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಮಂಜೂರಾಗಿದ್ದು, ಯಾವಾಗ; ಈ ಯೋಜನೆಯ ಅಂದಾಜು ಮೊತ್ತವೆಷ್ಟು; | ಚಿಕ್ಕಮಗಳೂರು ಜಿಲ್ಲೆಯ ಕಡೂರು, ತರೀಕೆರೆ ಹಾಗೂ ಚಿಕ್ಕಮಗಳೂರು ತಾಲ್ಲೂಕುಗಳ ಗ್ರಾಮಗಳಿಗೆ ಭದ್ರಾ ಅಣೆಕಟ್ಟೆಯಿಂದ ಕುಡಿಯುವ ನೀರು ಒದಗಿಸುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ದಿನಾಂಕ:27.05.2022 ರಂದು ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಯೋಜನೆಯ ಅಂದಾಜು ಮೊತ್ತ ರೂ.1265.00 ಕೋಟಿಗಳಾಗಿರುತ್ತದೆ. |
| ಆ) | ಯೋಜನೆಯ ಕಾಮಗಾರಿ ಪ್ರಾರಂಭವಾಗಿದ್ದು, ಯಾವಾಗ; ಗುತ್ತಿಗೆ ಕರಾರು ಪ್ರಕಾರ ಕಾಮಗಾರಿ ಯಾವಾಗ ಪೂರ್ಣಗೊಳ್ಳಬೇಕು; ಪ್ರಸ್ತುತ ಯಾವ ಕಾಮಗಾರಿಗಳು ಪೂರ್ಣಗೊಂಡಿವೆ; ಬಾಕಿ ಇರುವ ಕಾಮಗಾರಿ ಯಾವುವು; (ಕಾಮಗಾರಿಯ ಪ್ರಗತಿಯ ವಿವರ ನೀಡುವುದು) | ಯೋಜನೆಯ ಕಾಮಗಾರಿಯು ದಿನಾಂಕ:07.12.2022 ರಂದು ಪ್ರಾರಂಭವಾಗಿದ್ದು, ಗುತ್ತಿಗೆ ಕರಾರಿನಂತೆ ದಿನಾಂಕ:06.06.2025 ರಂದು ಪೂರ್ಣಗೊಳ್ಳಬೇಕಾಗಿರುತ್ತದೆ.<br>ಯೋಜನೆಯ ಎಲ್ಲಾ ಘಟಕಗಳು ಪ್ರಗತಿಯಲ್ಲಿದ್ದು, ಘಟಕವಾರು ಪ್ರಗತಿಯು ಈ ಕೆಳಕಂಡಂತಿವೆ:<br>1. <u>Intakewell/Jackwell (108 MLD):</u> ಸದರಿ ಯೋಜನೆಯಲ್ಲಿನ Intakewell/Jackwell ನ್ನು ಭದ್ರಾ ಜಲಾಶಯದ ಹಿನ್ನೀರಿನಲ್ಲಿ ಮಾಡಲು ಯೋಜನೆಯನ್ನು ರೂಪಿಸಲಾಗಿತ್ತು. ಆದರೆ, ಸದರಿ Intakewell/Jackwell ನಿರ್ಮಾಣಕ್ಕೆ ಗುರುತಿಸಿದ ಸ್ಥಳವು ಭದ್ರಾ ಜಲಾಶಯದ Safety Buffer Zone ನಲ್ಲಿ ಬರುವುದರಿಂದ, ಭದ್ರಾ ಜಲಾಶಯದ ಸುರಕ್ಷತಾ ದೃಷ್ಟಿಯಿಂದ ಹಾಗೂ ಸದರಿ ಸ್ಥಳವು ಭದ್ರಾ Wildlife ಇಲಾಖೆಯ Core Zone ಗೆ ಒಳಪಟ್ಟಿರುವುದರಿಂದ, Intakewell/Jackwell ನಿರ್ಮಾಣದ ಕಾಮಗಾರಿಯನ್ನು ಭದ್ರಾ ಜಲಾಶಯದ Downstream ನಲ್ಲಿ ನಿರ್ಮಾಣ ಮಾಡಲು ಪರಿಷ್ಕರಿಸಿ ಕಾಮಗಾರಿಯನ್ನು ಪ್ರಾರಂಭ ಮಾಡಲು ಕ್ರಮವಹಿಸಲಾಗುತ್ತಿದೆ.<br>2. <u>Water Treatment Plant (40 MLD):</u> ಸದರಿ ಯೋಜನೆಯ Water Treatment Plant ನ್ನು ಭದ್ರಾ ಜಲಾಶಯದ ಕೆಳಭಾಗದಲ್ಲಿ ನಿರ್ಮಾಣ ಮಾಡಲು ಯೋಜನೆಯನ್ನು ರೂಪಿಸಲಾಗಿತ್ತು. ಆದರೆ, ಸದರಿ Water Treatment Plant ನಿರ್ಮಾಣಕ್ಕೆ ಗುರುತಿಸಿದ ಸ್ಥಳವು ಭದ್ರಾ ಜಲಾಶಯದ Safety Buffer Zone ನಲ್ಲಿ ಬರುವುದರಿಂದ, ಭದ್ರಾ ಜಲಾಶಯದ ಸುರಕ್ಷತಾ ದೃಷ್ಟಿಯಿಂದ Water Treatment Plant ನಿರ್ಮಾಣ ಕಾಮಗಾರಿಯನ್ನು ಬಾವಿಕೆರೆ ಗ್ರಾಮ ಪಂಚಾಯಿತಿ, ಅರಸೀಕೆರೆ ಗ್ರಾಮಕ್ಕೆ ಸ್ಥಳಾಂತರಿಸಲಾಗಿರುತ್ತದೆ. ಪ್ರಸ್ತುತ ಒಟ್ಟು 22 Component ಗಳ ಪೈಕಿ, 6 Component ಗಳ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |

3. Master Balancing Reservoir (MBR): ಯೋಜನೆಯಲ್ಲಿ ಒಟ್ಟು ಎರಡು MBRಗಳ ಪೈಕಿ, ತರೀ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ MBR-1 ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಹಾಗೂ ಕಡೂರು ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ MBR-2 ಸ್ಥಳವು ಅರಣ್ಯ ಇಲಾಖೆಗೆ ವ್ಯಾಪ್ತಿಗೆ ಸೇರಿರುವುದರಿಂದ, ಅನುಮತಿಗಾಗಿ Parivesh 2.0 ರಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ ಹಾಗೂ Stage-1 ಅನುಮತಿಯನ್ನು ನಿರೀಕ್ಷಿಸಿದೆ.
4. Intermediate Pumping Station (IPS): ಸದರಿ ಯೋಜನೆಯಲ್ಲಿ ಒಟ್ಟು ಮೂರು IPSಗಳ ಪೈಕಿ, ತರೀಕೆರೆ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ IPS-1 ಕಾಮಗಾರಿಯು ಪ್ರಗತಿಯಲ್ಲಿರುತ್ತದೆ ಹಾಗೂ ಕಡೂರು ಮತ್ತು ಚಿಕ್ಕಮಗಳೂರು ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ IPS-2 & IPS-3 ಸ್ಥಳಗಳು, ಅರಣ್ಯ ಇಲಾಖೆ ವ್ಯಾಪ್ತಿಯಲ್ಲಿದ್ದು, ಅನುಮತಿಗಾಗಿ Parivesh 2.0 ರಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ ಹಾಗೂ Stage-1 ಅನುಮತಿಯನ್ನು ನಿರೀಕ್ಷಿಸಿದೆ.
5. Zonal Balancing Tank (ZBT): ಸದರಿ ಯೋಜನೆಯಲ್ಲಿ ಒಟ್ಟು 49 ZBTಗಳ ಪೈಕಿ, 13 ZBT ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ, 11 ZBT ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿರುತ್ತದೆ, ನೀರಾವರಿ ಇಲಾಖೆ ವ್ಯಾಪ್ತಿಯಲ್ಲಿರುವ ಒಟ್ಟು 2 ಸ್ಥಳಗಳ ಹಸ್ತಾಂತರ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ ಮತ್ತು ಅರಣ್ಯ ಇಲಾಖೆ ವ್ಯಾಪ್ತಿಯಲ್ಲಿರುವ ಒಟ್ಟು 23 ಸ್ಥಳಗಳ ಅನುಮತಿಗಾಗಿ Parivesh 2.0 ರಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ ಹಾಗೂ Stage-1 ಅನುಮತಿಯನ್ನು ನಿರೀಕ್ಷಿಸಿದೆ.
6. Over Head Tank (OHT): ಸದರಿ ಯೋಜನೆಯಲ್ಲಿ ಒಟ್ಟು 334 OHTಗಳ ಪೈಕಿ, 228 OHT ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. 19 OHT ಗಳು ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿದ್ದು, ಅನುಮತಿಗಾಗಿ PARIVESH 2.0 ರಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ ಹಾಗೂ Stage-1 ಅನುಮತಿಯನ್ನು ನಿರೀಕ್ಷಿಸಿದೆ, ಮತ್ತು ಉಳಿದ 87 OHTಗಳನ್ನು ಪ್ರಾರಂಭಿಸಬೇಕಾಗಿರುತ್ತದೆ.
7. MS Pipeline: ಸದರಿ ಯೋಜನೆಯಲ್ಲಿ ಒಟ್ಟು 392.89 ಕಿ.ಮಿ.ಗಳ ಪೈಕಿ, ಒಟ್ಟು 177.44 ಕಿ.ಮಿ. (ಶೇ. 45.16%) ಪೈಪ್‌ಲೈನ್ ಅಳವಡಿಸುವ ಕಾಮಗಾರಿಯು ಪೂರ್ಣಗೊಂಡಿರುತ್ತದೆ,
8. HDPE Pipeline: ಸದರಿ ಯೋಜನೆಯಲ್ಲಿ ಒಟ್ಟು 1115.80 ಕಿ.ಮಿ.ಗಳ ಪೈಕಿ 678.43 ಕಿ.ಮಿ. (ಶೇ. 60.80%) ಪೈಪ್‌ಲೈನ್ ಅಳವಡಿಸುವ ಕಾಮಗಾರಿಯು ಪೂರ್ಣಗೊಂಡಿರುತ್ತದೆ.

| | | |
|---|---|---|
| | ಈ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಏನಾದರೂ ತೊಡಕುಗಳಿವೆಯೇ; (ವಿವರ ಒದಗಿಸುವುದು) | 1. ಸದರಿ ಕಾಮಗಾರಿಗೆ ಒಟ್ಟಾರೆ, 13.10 ಹೆಕ್ಟೇರ್ ರಷ್ಟು (MBR-2, IPS-2, & IPS-3, 23 nos ZBTs, 19 nos. OHT, 60 ಕಿ.ಮೀಗಳಿಗಿಂತ ಹೆಚ್ಚು ಪೈಪ್ ಲೈನ್ ಅಳವಡಿಕೆ ಒಳಗೊಂಡಂತೆ) ಅರಣ್ಯ ಭೂಮಿಯ ಅವಶ್ಯವಿದ್ದು, Parivesh 2.0 ರಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ ಹಾಗೂ Stage-1 ಅನುಮತಿಯನ್ನು ನಿರೀಕ್ಷಿಸಿದೆ.<br>2. ಸದರಿ ಯೋಜನೆಗೆ ಒಟ್ಟು 17 ರೈಲ್ವೇ ಕ್ರಾಸಿಂಗ್ ಗಳಿಗೆ ಅನುಮತಿಯ ಅವಶ್ಯವಿದ್ದು, ಪ್ರಸ್ತುತ ಒಟ್ಟು 8 ರೈಲ್ವೇ ಕ್ರಾಸಿಂಗ್‌ಗಳಿಗೆ ಅನುಮತಿ ದೊರೆತಿದ್ದು, ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿರುತ್ತದೆ. ಬಾಕಿ 9 ರೈಲ್ವೇ ಕ್ರಾಸಿಂಗ್‌ಗಳ ಜಂಟಿ ತಪಾಸಣೆ ಪ್ರಕ್ರಿಯ ಪ್ರಗತಿಯಲ್ಲಿರುತ್ತದೆ.<br>3. ಸದರಿ ಯೋಜನೆಗೆ ರಾಷ್ಟ್ರೀಯ ಹೆದ್ದಾರಿ-173 (ಕಡೂರು-ಹೊಳಲ್ಕೆರೆ) ವ್ಯಾಪ್ತಿಯಲ್ಲಿ ಬರುವ ಒಟ್ಟು 11.140 ಕಿ.ಮಿ. ಗೆ ಅನುಮತಿಯ ಅವಶ್ಯವಿದ್ದು, ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ ಹಾಗೂ ಅನುಮತಿಯು ನಿರೀಕ್ಷಿಸಿದೆ.<br>4. Zonal Balancing Tank ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ, ಕರ್ನಾಟಕ ನೀರಾವರಿ ನಿಗಮ ನಿಯಮಿತ ಮತ್ತು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತರವರಿಂದ ಸ್ಥಳಗಳ ಅವಶ್ಯವಿದ್ದು, ಪ್ರಸ್ತಾವನೆಯನ್ನು ಸಂಬಂಧಪಟ್ಟ ಇಲಾಖೆಗಳಿಗೆ ಸಲ್ಲಿಸಲಾಗಿರುತ್ತದೆ. ಹಸ್ತಾಂತರ ಪ್ರಕ್ರಿಯೆ ನಿರೀಕ್ಷಿಸಿದ. |
| ಈ) | ಎಲ್ಲಾ ತೊಡಕುಗಳನ್ನು ನಿವಾರಿಸಿ ಯಾವಾಗ ಕಾಮಗಾರಿಯನ್ನು ಪೂರ್ಣಗೊಳಿಸಿ ಜನರಿಗೆ ನೀರೊದಗಿಸಲಾಗುವುದು ? | ಸದರಿ ಕಾಮಗಾರಿಯನ್ನು ಸೆಪ್ಟೆಂಬರ್-2026 ರೊಳಗೆ ಪೂರ್ಣಗೊಳಿಸಿ, ಯೋಜನೆಯಲ್ಲಿ ಪರಿಗಣಿಸಿರುವ ಎಲ್ಲಾ ಗ್ರಾಮಗಳಿಗೆ ನೀರೊದಗಿಸುವ ಉದ್ದೇಶ ಹೊಂದಿರಲಾಗಿರುತ್ತದೆ. |

ಸಂ:ಗ್ರಾಕುನೀ&ನೈಇ/ಮುಇಂ /25/2025-26

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.